ಬೆಂಗಳೂರು ಮೂಲದ ವಿವೇಕ್ ಮುತ್ತುರಾಮಲಿಂಗಂ ಛಾಯಾಚಿತ್ರಗಳ ಮೂಲಕ ಮನುಷ್ಯ ಹಾಗೂ ಪ್ರಕೃತಿಯ ಗುಣ–ಸ್ವಭಾವಗಳನ್ನು ಅರಿತುಕೊಳ್ಳಲು ಹಂಬಲಿಸುವ ಸೃಜನಶೀಲ ಛಾಯಾಗ್ರಾಹಕ. ಫೋಟೊಗ್ರಫಿಯೊಂದಿಗಿನ ಅವರ ನಂಟಿಗೆ ಹೊಸ ಆಯಾಮ ದೊರೆತದ್ದು ಸಾಂಪ್ರದಾಯಿಕ ಅನಲಾಗ್ ಛಾಯಾಗ್ರಹಣದಲ್ಲಿ. ಅನಲಾಗ್ ಫೋಟೊಗ್ರಫಿಯಲ್ಲಿನ ಪ್ರಯೋಗಗಳು ಹಾಗೂ ಕೋವಿಡ್ ಕಾಲಘಟ್ಟದಲ್ಲಿ ಗೆಳೆಯರ ಜೊತೆಗೂಡಿ ರೂಪಿಸಿದ ಸ್ಟುಡಿಯೊ, ಡಾರ್ಕ್‌ರೂಮ್ ಪ್ರಯೋಗಗಳ ಕುರಿತ ಈ ಬರಹ ಛಾಯಾಗ್ರಹಣದ ಬಗ್ಗೆ ಪ್ರೀತಿ ಮೂಡಿಸುವಂತಿದೆ.

# ಅನಲಾಗ್ ಹಳತುಹೊನ್ನು

## ವಿವೇಕ್ ಮುತ್ತುರಾಮಲಿಂಗಂ ಅವರ ಅನಲಾಗ್ ಛಾಯಾಗ್ರಹಣದ ಅನನ್ಯ ಕ್ಷಣಗಳು

ಇಂಗ್ಲಿಷ್ ಮೂಲ: **ವಿವೇಕ್ ಮುತ್ತುರಾಮಲಿಂಗಂ**
ಕನ್ನಡಕ್ಕೆ: **ಸ್ನೇಹಜಯಾ ಕಾರಂತ**


ಸಮಕಾಲೀನ ಕಲಾ ಚಟುವಟಿಕೆಗಳಿಗೆ ನೆಲೆಯಾಗಿರುವ ಬೆಂಗಳೂರಿನ ‘ಕಾಣಿಕೆ’ ಸ್ಟುಡಿಯೊದ ಡಾರ್ಕ್‌ರೂಮ್. ಚಿತ್ರ: ಸ್ನಿಗ್ಧಾ ರಾಣಾ

**2013**ರ ಮಾರ್ಚ್ ತಿಂಗಳು. ಗೋವಾದ ಕ್ಯಾಲಂಗೂಟ್‌ನ ಮೂಲೆಯೊಂದರಲ್ಲಿದ್ದ, ಗೋವನ್ನರು ಪ್ರತಿದಿನ ಬಳಸುವ ಬ್ರೆಡ್ ಆದ ‘ಪೊಯಿ’ಯನ್ನು ತಯಾರಿಸುತ್ತಿದ್ದ ಹಳೆಯ ಸಾಂಪ್ರದಾಯಿಕ ಬೇಕರಿಯೊಳಗೆ ಅಕಸ್ಮಾತ್ತಾಗಿ ನುಗ್ಗಿದ್ದೆ. ಮುಂದಿನ ಕೆಲವು ದಿನಗಳ ಕಾಲ, ರಾತ್ರಿಯ ವೇಳೆಯಲ್ಲಿ ಆ ಬೇಕರಿಯ ಕಾವಿನಲ್ಲಿ ‘ಪೊದೇರ್’ಗಳ (ಬೇಕರ್‌ಗಳ) ಜೊತೆ ಮಾತನಾಡುತ್ತಾ, ಅವರೊಂದಿಗೆ ಚಹಾ ಕುಡಿಯುತ್ತ ಮತ್ತು ಬೇಕರಿಯ ಓವನ್ನಿನ ಸುತ್ತ ನಡೆಯುವ ಚಟುವಟಿಕೆಗಳ ಮತ್ತು ಪಾಳಿಗಳ ನಡುವೆ ಅವರು ವಿಶ್ರಮಿಸುತ್ತಿದ್ದ ಜಾಗಗಳ ಛಾಯಾಚಿತ್ರಗಳನ್ನು ತೆಗೆಯುವುದರಲ್ಲಿ ನಿರತನಾದೆ. ಅವರಲ್ಲಿ ಕೆಲವರು ಪೊಯಿಗಳನ್ನು ಬಟವಾಡೆ ಮಾಡಲು ಹೋದಾಗ ಅವರನ್ನು ಹಿಂಬಾಲಿಸಿದೆ ಕೂಡ.

ಬೆಳಿಗ್ಗೆ ನಾನು ಡಾರ್ಕ್‌ರೂಮಿಗೆ ಹಿಂದಿರುಗಿದ ಮೇಲೆ ನನ್ನ ಆಯ್ಕೆಯ ಮಾಧ್ಯಮವಾದ ಉಪ್ಪು ಕಾಗದದ ಮುದ್ರಣ (ಸಾಲ್ಟೆಡ್ ಪ್ರಿಂಟ್) ತಂತ್ರವನ್ನು ಬಳಸಿ ಗೋವೆಯ ವಿವಿಧ ಮುಖಗಳನ್ನು ಹೇಗೆಲ್ಲ ದಾಖಲಿಸಬಹುದು ಎನ್ನುವುದರ ಬಗ್ಗೆ ಚಿಂತನೆ ನಡೆಸುತ್ತಿದ್ದೆ.

ಉತ್ತರ ಗೋವಾದ ಡೊಂಗೊರ್ಪುರಿನ ಕುಟುಂಬವೊಂದರ ಎಸ್ಟೇಟಿನಲ್ಲಿ ಏರ್ಪಡಿಸಲಾಗಿದ್ದ ಎರಡು ತಿಂಗಳ ಅವಧಿಯ ‘ಏ ಎ ಲ್ಟಿ ಲ್ಯಾಬ್ ಫೋಟೊಗ್ರಫಿ’ ಎಂಬ ರೆಸಿಡೆನ್ಸಿ ಕಾರ್ಯಕ್ರಮಕ್ಕಾಗಿ ಆ ವರ್ಷ ಆಹ್ವಾನಿತರಾಗಿದ್ದ ನಾಲ್ಕು ಕಲಾವಿದರಲ್ಲಿ ನಾನೂ ಒಬ್ಬನಾಗಿದ್ದೆ. ಬಿದಿರಿನ ಪೀಠೋಪಕರಣಗಳಿದ್ದ ಹಜಾರ, ಛಾಯಾಗ್ರಹಣ ಸಂಬಂಧಿ ಪುಸ್ತಕಗಳು, ಸೈಕ್ಲೋಸ್ಟೈಲ್ ಕೈಪಿಡಿಗಳಿಂದ ಕೂಡಿದ್ದ ಒಂದು ಗ್ರಂಥಾಲಯ, ಸ್ಕ್ಯಾನರ್‌ಗೆ ಸಂಪರ್ಕಿಸಲಾಗಿದ್ದ ಡೆಸ್ಕ್‌ಟಾಪ್ ಕಂಪ್ಯೂಟರ್, ಕಾವಿ ನೆಲದ ವರಾಂಡ ಮತ್ತು ಒಂದು ವಿಶೇಷ ಬಗೆಯ ಡಾರ್ಕ್‌ರೂಮ್– ಇವುಗಳಿಗೆ ಅನುವು ಮಾಡಿಕೊಡಲೆಂದು ಒಂದು ಅತಿಥಿಗೃಹವನ್ನು ‘ಗೋವಾ ಸೆಂಟರ್ ಫಾರ್ ಆಲ್ಟರ್ನೇಟ್ ಫೋಟೊಗ್ರಫಿ’ (ಗೋವಾ – ಸಿಎಪಿ) ಬಳಸಿಕೊಂಡಿತ್ತು.

ಈ ಕಾರ್ಯಕ್ರಮದ ಉದ್ದೇಶ, ಅನಲಾಗ್ ಛಾಯಾಗ್ರಹಣದ ಪ್ರಕ್ರಿಯೆ (ಈ ಪರಿಭಾಷೆಯು ಕಾಗದ, ಫಿಲ್ಮ್ ಅಥವಾ ಪ್ಲೇಟಿನಂತಹ ಗಡುಸಾದ ಮೇಲ್ಮೈನಲ್ಲಿ ಚಿತ್ರವನ್ನು ಪಡಿಮೂಡಿಸಲು ಉಪಯೋಗಿಸುವ ರಾಸಾಯನಿಕ ಪ್ರಕ್ರಿಯೆಗಳಿಗೆ ಅನ್ವಯಿಸುತ್ತದೆ) ಕುರಿತ ಕಲಿಕೆಯನ್ನು ಪುನರುಜ್ಜೀವನಗೊಳಿಸುವುದು, ಪೋಷಿಸುವುದು ಮತ್ತು ಸಮಕಾಲೀನ ಕಲಾವಿದರಿಗೆ ತಂತಮ್ಮ ಕಲಾಸಂಬಂಧಿತ ಕೆಲಸಗಳಲ್ಲಿ ಇದನ್ನು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು.


ಗ್ರ್ಯಾಫೈಟ್ ಪೆನ್ಸಿಲ್‌ನಲ್ಲಿ ಮೂಡಿಸಿದ ಮೈನಾ ಹಕ್ಕಿಯ ರೇಖಾಚಿತ್ರ, ಉಪ್ಪು ಕಾಗದದ ಮುದ್ರಣದಲ್ಲಿ

ಇಂದಿನ ಡಿಜಿಟಲ್ ಛಾಯಾಗ್ರಹಣದ ಜನಪ್ರಿಯತೆಯ ಕಾರಣದಿಂದಾಗಿ ಹಿಂದಿನ ಹಲವು ಅನಲಾಗ್ ಪ್ರಕ್ರಿಯೆಗಳು ಜನರ ಮರೆವಿನ ಶಾಪಕ್ಕೆ ಗುರಿಯಾಗಿ ಅಳಿವಿನಂಚಿಗೆ ಸರಿದಿವೆ. ಅನಲಾಗ್ ಛಾಯಾಗ್ರಹಣ ಪ್ರಕ್ರಿಯೆಗಳು ಅವುಗಳದ್ದೇ ಆದ ವೈಶಿಷ್ಟ್ಯ– ವೈಚಿತ್ರ್ಯಗಳನ್ನು ಹೊಂದಿದ್ದರೂ ಅವು ಕಲಾವಿದರಿಗೆ ಬಗೆಬಗೆಯ ಮಾರ್ಪಾಡುಗಳನ್ನೊಳಗೊಂಡ ಛಾಯಾಗ್ರಹಣ ವೈವಿಧ್ಯವನ್ನು ಸಾಧ್ಯಗೊಳಿಸಿವೆ. ಅನಲಾಗ್ ಛಾಯಾಗ್ರಹಣ ಪ್ರಯೋಗಗಳಿಗೆ ಕೌಶಲ ಮತ್ತು ಪರಿಶ್ರಮ ಅವಶ್ಯಕವಾಗಿರುತ್ತದೆ. ಇವಕ್ಕೆ ಟೆಕ್ಸ್‌ಟೈಲ್ ಜಗತ್ತಿನಲ್ಲಿ ಕೈಮಗ್ಗಕ್ಕೆ ಸಮಾನವಾದ ಸ್ಥಾನವಿದೆ.

ಗೋವಾದ ಬಾಗಾ ಬೀಚಿನಲ್ಲಿ ನಾನು ಕಡಲ ನೀರನ್ನು ಸಂಗ್ರಹಿಸಿ, ಅದನ್ನು ಸಾಂದ್ರೀಕೃತ ಸೋಡಿಯಂ ಕ್ಲೋರೈಡನ್ನು (ಈ ಪ್ರಕ್ರಿಯೆಯ ಮುಖ್ಯ ಅಂಶಗಳಲ್ಲಿ ಒಂದು) ಪೂರ್ವಸೂಚಿತ ಶೇಕಡಾ ಎರಡರ ಪ್ರಮಾಣದಲ್ಲಿ ತೆಳುಗೊಳಿಸಿದೆ. ಈ ದ್ರಾವಣವನ್ನು ಬಳಸಿಕೊಂಡು ನಾನು ಬೇಕರಿಯಲ್ಲಿ ತೆಗೆದ ಚಿತ್ರಗಳ ಪ್ರಿಂಟ್‌ಗಳನ್ನು